ಜೆ.ಎಸ್.ಎಸ್. ಲಾ ಕಾಲೇಜು ಅಲುಮ್ನಿ ಅಸೋಸಿಯೇಷನ್ (ರಿ),

ನ್ಯೂ ಕಾಂತರಾಜು ಅರಸು ರಸ್ತೆ, ಕುವೆಂಪುನಗರ, ಮೈಸೂರು-23.

****

ಸಂಘದ ನಿಯಮ, ಮತ್ತು ನಿಬಂಧನೆಗಳು

11. ಸಂಘದ ಹೆಸರು : ಜೆ.ಎಸ್.ಎಸ್. ಲಾ ಕಾಲೇಜು ಅಲುಮ್ನಿ ಅಸೋಸಿಯೇಷನ್ (ರಿ), ನ್ಯೂ ಕಾಂತರಾಜು ಅರಸು ರಸ್ತೆ, ಕುವೆಂಪುನಗರ, ಮೈಸೂರು-23.

2. ಸಂಘದ ವಿಳಾಸ : ಜೆ.ಎಸ್.ಎಸ್. ಲಾ ಕಾಲೇಜು ಅಲುಮ್ನಿ ಅಸೋಸಿಯೇಷನ್ (ರಿ), ನ್ಯೂ ಕಾಂತರಾಜು ಅರಸು ರಸ್ತೆ, ಕುವೆಂಪುನಗರ, ಮೈಸೂರು-23.

3. ಕಾರ್ಯವ್ಯಾಪ್ತಿ : ಜೆ.ಎಸ್.ಎಸ್. ಲಾ ಕಾಲೇಜಿನ ಹಿರಿಯ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಾಗಿರುತ್ತದೆ.

4. ಸಂಘದ ವರ್ಷ: ಪ್ರತಿ ವರ್ಷದ 1ನೇ ಏಪ್ರಿಲ್ ಮಾಹೆಯಿಂದ ಪ್ರಾರಂಭವಾಗಿ ಮಾರ್ಚ್ 31 ಕ್ಕೆ ಮುಕ್ತಾಯಗೊಳ್ಳುವಂತೆ ಇರತಕ್ಕದ್ದು.

5. ಸಂಘದ ಸದಸ್ಯತ್ವದ ಬಗ್ಗೆ:-

1) ಗೌರವ ಸದಸ್ಯತ್ವ:-
ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವವರನ್ನು ಗುರುತಿಸಿ ಗೌರವ ಸದಸ್ಯತ್ವವನ್ನು ಕಾರ್ಯಕಾರಿ ಸಮಿತಿಯ ಅನುಮೋದನೆಯೊಂದಿಗೆ ಪ್ರಧಾನ ಮಾಡಲಾಗುವುದು.

ಸದಸ್ಯತ್ವದ ವಿವರ ಈ ಕೆಳಕಂಡಂತೆ ಇರುತ್ತದೆ.

1. ಮಹಾಪೋಷಕರು : ರೂ. 10,000/-ರೂಗಳಿಗೂ ಮೇಲ್ಪಟ್ಟು
2, ಸಾಮಾನ್ಯ ಸದಸ್ಯತ್ವ : ರೂ. 500/-

2) ಸಾಮಾನ್ಯ ಸದಸ್ಯರು: ಸದಸ್ಯತ್ವ ಹೊಂದಲು ಇಚ್ಛೆಯುಳ್ಳ ಪ್ರತಿಯೊಬ್ಬ ಸದಸ್ಯರು ರೂ.500/- ಶುಲ್ಕ ಪಾವತಿಸಿ ಸಾಮಾನ್ಯ ಸದಸ್ಯತ್ವವನ್ನು ಪಡೆದುಕೊಳ್ಳುವುದು. ಮತ್ತು ರೂ.500/- ಗಳ ಶುಲ್ಕ ಪಾವತಿಸಿ ಪ್ರತಿ ವರ್ಷ ಸದಸ್ಯತ್ವ ನವೀಕರಿಸಿಕೊಳ್ಳುವುದು.

N. Vanishree
ಅಧ್ಯಕ್ಷರು

ಕಾರ್ಯದರ್ಶಿ

6. **ಸದಸ್ಯತ್ವ ಪಡೆಯುವ ವಿಧಾನ:-**

ಸಂಘದ ಧ್ಯೇಯೋದ್ದೇಶಗಳನ್ನು ಒಪ್ಪಿ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ ಸಂಘವು ನಿಗದಿಪಡಿಸಿದ ಶುಲ್ಕವನ್ನು ಪಾವತಿಸಿದ ನಂತರ ಕಾರ್ಯಕಾರಿ ಸಮಿತಿಯ ಅನುಮೋದನೆ ಮೇರೆಗೆ ಸದಸ್ಯತ್ವ ಪಡೆಯಬಹುದು.

7. **ಸದಸ್ಯತ್ವ ನೋಂದಣಿ ವಹಿ:**

ಸಂಘದ ಸದಸ್ಯತ್ವ ಪಡೆದ ಎಲ್ಲಾ ಸದಸ್ಯರ ಹೆಸರು, ಪದನಾಮ, ವಿಳಾಸ, ವಯಸ್ಸು ಇತ್ಯಾದಿ ವಿವರಗಳನ್ನು ಒಂದು ಪ್ರತ್ಯೇಕ ವಹಿಯಲ್ಲಿ ದಾಖಲು ಮಾಡಿ ಇಡತಕ್ಕದ್ದು.

8. **ಸದಸ್ಯತ್ವ ರದ್ದತಿ:**

1. ಯಾವುದೇ ಸದಸ್ಯರು ಸಂಘದ ಹಿತಾಸಕ್ತಿಗೆ ಧಕ್ಕೆ ತಂದಾಗ ಕಾರ್ಯಕಾರಿ ಸಮಿತಿಯಲ್ಲಿ ಚರ್ಚಿಸಿ ತೆಗೆದುಹಾಕಬಹುದು.
2. ಸಂಘದ ಸದಸ್ಯರು ಇಚ್ಛಾಪೂರ್ವಕವಾಗಿ ರಾಜೀನಾಮೆ ನೀಡಿದಾಗ,
3. ಸಂಘದ ಸದಸ್ಯರು ಮೃತಪಟ್ಟಲ್ಲಿ.

9. **ಸಂಘದ ಆಸ್ತಿ:**

ಸಂಘದ ಆಸ್ತಿಯು ದಾನಿಗಳು ನೀಡುವ ದಾನ, ವಂತಿಗೆ ಹಣ, ಸ್ವಾಯತ್ತ ಸಂಸ್ಥೆಗಳು ನೀಡುವ ಕೊಡುಗೆ, ಸರ್ಕಾರ ನೀಡುವ ಅನುದಾನ, ಸಂಘವು ಮಾಡುವ ಎಲ್ಲಾ ಆಸ್ತಿಯು ಸಂಘದ ಆಸ್ತಿಯಾಗಿರುತ್ತದೆ. ಸಂಘದ ಆಸ್ತಿಯನ್ನು ಯಾವುದೇ ಸದಸ್ಯರು ಹಂಚಿಕೊಳ್ಳುವುದನ್ನು ನಿಷೇಧಿಸಿದೆ. ಇದನ್ನು ಸಂಘದ ಅಭಿವೃದ್ಧಿಗೆ ಮತ್ತು ಸಂಘದ ಇನ್ನಿತರ ಉದ್ದೇಶಗಳಿಗೆ ಮಾತ್ರ ಬಳಸಿಕೊಳ್ಳತಕ್ಕದ್ದು.

10. **ಸಂಘದ ಧ್ಯೇಯೋದ್ದೇಶಗಳು:-**

1. ಸಂಘದ ಸದಸ್ಯರುಗಳಲ್ಲಿ ಮತ್ತು ಕಾಲೇಜಿನ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯತೆಯ ಅರಿವು, ಸ್ವಾಭಿಮಾನ, ಸ್ವಾವಲಂಬನೆ, ಹಾಗೂ ಐಕ್ಯತಾ ಮನೋಭಾವನೆ ಬೆಳೆಸುವುದು.
2. ಸಂಘದ ಸದಸ್ಯರುಗಳು ಮತ್ತು ಕಾಲೇಜಿನ ವಿದ್ಯಾರ್ಥಿಗಳಿಗೆ ಸಾಮಾಜಿಕ, ಸಾಂಸ್ಕೃತಿಕ ನೈತಿಕ, ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಉನ್ನತಿ ಸಾಧಿಸಲು ಸಂಘದ ವತಿಯಿಂದ ಅಗತ್ಯವಾದ ಕ್ರಮ ಕೈಗೊಳ್ಳುವುದು.
3. ಸಂಘದ ವತಿಯಿಂದ ಸದಸ್ಯರ ಮತ್ತು ಕಾಲೇಜಿನ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವುದು.
4. ಸಂಘದ ವತಿಯಿಂದ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುವ ಬಡ ವಿದ್ಯಾರ್ಥಿಗಳಿಗೆ ಅವಶ್ಯಕವಾದ ಆರ್ಥಿಕ ನೆರವನ್ನು ಒದಗಿಸುವುದು.

N. Vanishree

ಅಧ್ಯಕ್ಷರು

ಕಾರ್ಯದರ್ಶಿ

5. ಸಂಘದ ವತಿಯಿಂದ ಶೈಕ್ಷಣಿಕ ಬೆಳವಣಿಗೆಗೆ ಅಗತ್ಯವಾದ ಕ್ರಮವನ್ನು ಕೈಗೊಂಡು, ವಿವಿಧ ವಿಷಯ ತಜ್ಞರನ್ನು ಕರೆಸಿ, ಕಾಲೇಜಿನಲ್ಲಿ ವಿಚಾರ ಗೋಷ್ಠಿಗಳನ್ನು ಏರ್ಪಡಿಸುವುದು, ಕಾಲೇಜಿನಲ್ಲಿ ಪ್ರತಿ ವರ್ಷ ಹಿರಿಯ ವಿದ್ಯಾರ್ಥಿಗಳ ಸಮಾವೇಶಗಳನ್ನು ನಡೆಸುವುದು, ದತ್ತಿ ನಿಧಿ ಸ್ಥಾಪಿಸುವುದು
6. ಕಾಲೇಜಿನ ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಬೌದ್ಧಿಕ ಪ್ರಗತಿ ಬಗ್ಗೆ ಶ್ರಮಿಸುವುದು, ಹಾಗೂ ವಿದ್ಯಾರ್ಥಿಗಳಿಗೆ ವಿಷಯ ತಜ್ಞರಿಂದ ವೃತ್ತಿ ಆಧಾರಿತ ತರಬೇತಿಯನ್ನು ಕೊಡಿಸುವುದು.
7. ಸಂಘದ ವತಿಯಿಂದ ಶೈಕ್ಷಣಿಕ ಪ್ರಗತಿಯಲ್ಲಿ ಉನ್ನತ ಸಾಧನೆ ಮಾಡುವ ವಿದ್ಯಾರ್ಥಿಗಳನ್ನು ಸನ್ಮಾನಿಸುವುದು. ಮತ್ತು ಬಹುಮಾನ ನೀಡುವುದು.
8. ಸಂಘದ ವತಿಯಿಂದ ಉಚಿತ ಕಾನೂನು ಸಲಹಾ ಶಿಬಿರಗಳನ್ನು ಏರ್ಪಡಿಸುವುದು. ಅಂತರ್ಕಾಲೇಜು ಚರ್ಚಾಸ್ಪರ್ಧೆಗಳನ್ನು ಏರ್ಪಡಿಸುವುದು.
9. ಸಂಘದ ವತಿಯಿಂದ ಸದಸ್ಯರ ಮತ್ತು ಕಾಲೇಜಿನ ವಿದ್ಯಾರ್ಥಿಗಳ ಅವಶ್ಯಕತೆಗಳಿಗೆ ಅನುಗುಣವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲು ಶ್ರಮಿಸುವುದು.
10. ಸಂಘದ ವತಿಯಿಂದ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ತಜ್ಞರುಗಳನ್ನು ಕರೆಸಿ ಕಾನೂನಿನ ಬಗ್ಗೆ ಅರಿವು ಮೂಡಿಸುವುದು.
11. ಸಂಘದ ಸದಸ್ಯರ ಮತ್ತು ಕಾಲೇಜಿನ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸುವುದು, ಸ್ವಚ್ಚ ಪರಿಸರ ಸಂರಕ್ಷಣೆಯ ಸಲುವಾಗಿ ಗಿಡ ಮರ ನೆಡಲು ಸಂಘ ಸಂಸ್ಥೆಗಳಿಗೆ ನೆರವು ನೀಡುವುದು. ಕಾಲೇಜಿನ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಕಾರ್ಯಕ್ರಮಗಳನ್ನು ನಡೆಸುವುದು.
12. ಸಂಘದ ಧ್ಯೇಯೋದ್ದೇಶಗಳನ್ನು ಅನುಷ್ಠಾನಗೊಳಿಸಲು ಅಗತ್ಯವಾದ ಆರ್ಥಿಕ ಸದೃಢತೆಯನ್ನು ಹೊಂದಲು, ಹಿರಿಯ ವಿದ್ಯಾರ್ಥಿಗಳು, ಸರ್ಕಾರ, ದಾನಿಗಳು ಹಾಗೂ ಸಂಘ ಸಂಸ್ಥೆಗಳಿಂದ ದಾನ, ಉಡುಗೊರೆಗಳನ್ನು ಪಡೆದು ಸಂಘದ ಉದ್ದೇಶಗಳ ಉಪಯೋಗಕ್ಕೆ ವಿನಿಯೋಗಿಸಿಕೊಳ್ಳುವುದು.
13. ಸಂಘದ ಅಭಿವೃದ್ಧಿಗೆ ಅಗತ್ಯವಾದ ಚರ ಮತ್ತು ಸ್ಥಿರ ಆಸ್ತಿಗಳನ್ನು ಹೊಂದುವುದು, ವಿಸ್ತರಿಸುವುದು ಮತ್ತು ಸಂಘದ ಶ್ರೇಯೋಭಿವೃದ್ಧಿಗೆ ಬಳಸಿಕೊಳ್ಳುವುದು.
14. ಇತರೆ ಸಂಘ ಸಂಸ್ಥೆಗಳೊಂದಿಗೆ ಕೈಜೋಡಿಸಿ ಕಾಲೇಜಿನ ಸಮಗ್ರ ಅಭಿವೃದ್ಧಿಗೆ ಶ್ರಮಿಸುವುದು ಮತ್ತು ಸಮಾಜ ಸೇವೆ ಮಾಡುವುದು.
15. ಸಂಘದ ವರ್ಷಾಂತ್ಯದ ಆದಾಯ ಖರ್ಚನ್ನು ಕಳೆದು ಉಳಿದ ಲಾಭದ ಹಣವನ್ನು ಸಂಘದ ಸದಸ್ಯರು ಯಾರೂ ಹಂಚಿಕೊಳ್ಳುವಂತಿಲ್ಲ. ಆದರೆ ಅದನ್ನು ಸಂಘದ ಉದ್ದೇಶ ಸಾಧನೆಗಾಗಿ ಮಾತ್ರ ಮರುವಿನಿಯೋಗ ಮಾಡತಕ್ಕದ್ದು.
16. ಸಂಘದ ಎಲ್ಲಾ ರೀತಿಯ ಪತ್ರ ವ್ಯವಹಾರಗಳನ್ನು ಜಿಲ್ಲಾ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಮತ್ತು ಇತರೆ ಕಚೇರಿಗಳಲ್ಲಿ ವ್ಯವಹರಿಸುವ ಅಧಿಕಾರವನ್ನು ಸಂಘದ ಅಧ್ಯಕ್ಷರು ಮತ್ತು ಸಂಘದ ಕಾರ್ಯದರ್ಶಿಯವರಿಗೆ ನೀಡಲಾಗಿದೆ.

N. Vanishree

ಅಧ್ಯಕ್ಷರು

ಕಾರ್ಯದರ್ಶಿ

11. ಸಂಘದ ವಾರ್ಷಿಕ ಮಹಾಸಭೆ:

ಸಂಘದ ವಾರ್ಷಿಕ ಮಹಾಸಭೆಯನ್ನು ಪ್ರತಿ ವರ್ಷಕ್ಕೊಮ್ಮೆ ಕೇಂದ್ರ ಸ್ಥಾನದಲ್ಲಿ ಅಥವಾ ಕಾರ್ಯಕಾರಿ ಸಮಿತಿ ಸಭೆಯು ತೀರ್ಮಾನಿಸುವ ಇತರೆ ಸ್ಥಳದಲ್ಲಿ ಕರೆದು ಅದರಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸುವುದು, ಅಂಗೀಕರಿಸುವುದು, ಅನುಮೋದಿಸುವುದು. ಮಹಾಸಭೆಯ ನೋಟೀಸನ್ನು ಎಲ್ಲಾ ಸದಸ್ಯರಿಗೂ 21 ದಿನ ಮುಂಚಿತವಾಗಿ ತಲುಪುವಂತೆ ಕಳುಹಿಸತಕ್ಕದ್ದು.

1. ವಾರ್ಷಿಕ ಲೆಕ್ಕ ಪತ್ರ ಮಂಡಿಸಿ ಅನುಮೋದನೆ ಪಡೆದುಕೊಳ್ಳುವುದು.
2. ಸಂಘದ ಮುಖ್ಯವಾದ ವಿಷಯಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ಮಂಡಿಸುವುದು ಮತ್ತು ಅಂಗೀಕರಿಸುವುದು ಮತ್ತು ವಾರ್ಷಿಕ ವರದಿಯನ್ನು ಮಂಡಿಸುವುದು.
3. ಆಯವ್ಯಯ ಮಂಡನೆ ಮತ್ತು ಅನುಮೋದನೆ.
4. ಸಂಘದ ನಿಯಮ ಮತ್ತು ನಿಬಂಧನೆಗಳ ತಿದ್ದುಪಡಿ.
5. ಮುಂದಿನ ವರ್ಷಕ್ಕೆ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳುವುದು.
6. ಸಂಘದ ಯಾವುದೇ ವಿಷಯಗಳಲ್ಲಿ ಮಹಾಸಭೆಯ ತೀರ್ಮಾನವೇ ಅಂತಿಮವಾಗಿರುತ್ತದೆ.

12. ಕೋರಂ:

ವಾರ್ಷಿಕ ಮಹಾಸಭೆಯನ್ನು ನಡೆಸಲು ಕನಿಷ್ಟ ಮೂರನೇ ಎರಡು ಭಾಗದಷ್ಟು ಸದಸ್ಯರು ಸಭೆಯಲ್ಲಿ ಹಾಜರಿರತಕ್ಕದ್ದು.

13. ಚುನಾವಣೆ:

1. ಪ್ರತಿ ಐದು ವರ್ಷಕ್ಕೊಮ್ಮೆ ಗುಪ್ತ ಮತದಾನದ ಮೂಲಕ ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ಚುನಾವಣೆಯನ್ನು ನಡೆಸತಕ್ಕದ್ದು.
2. ಸಂಘದ ಎಲ್ಲಾ ಪದಾಧಿಕಾರಿಗಳು ಮತ್ತು ನಿರ್ದೇಶಕರುಗಳನ್ನು ಗುಪ್ತ ಮತದಾನದ ಮೂಲಕ ಸಂಘದ ಸದಸ್ಯರು ಚುನಾಯಿಸತಕ್ಕದ್ದು ಅಥವಾ ಆಯ್ಕೆ ಮಾಡತಕ್ಕದ್ದು.
3. ಸಂಘದ ಪದಾಧಿಕಾರಿಗಳು ಮತ್ತು ನಿರ್ದೇಶಕರುಗಳ ಹುದ್ದೆಗೆ ಸ್ಪರ್ಧಿಸುವವರು ಯಾವುದೇ ಸಿಂಡಿಕೇಟ್ ಅಥವಾ ಗುಂಪು ಮಾಡಿಕೊಂಡು ಮತ ಯಾಚನೆ ಮಾಡುವಂತಿಲ್ಲ. ಹಾಗೆ ಮಾಡಿದಲ್ಲಿ ಅಂತಹವರ ಉಮೇದುವಾರಿಕೆಯನ್ನು ರದ್ದುಪಡಿಸಲಾಗುವುದು. ಸಂಘದ ಪದಾಧಿಕಾರಿಗಳು ಮತ್ತು ಎಲ್ಲಾ ನಿರ್ದೇಶಕರುಗಳ ಹುದ್ದೆಗೆ ಸ್ಪರ್ಧಿಸುವವರು ವೈಯುಕ್ತಿಕವಾಗಿ ಮಾತ್ರ ಮತಯಾಚನೆ ಮಾಡುವುದು ಮತ್ತು ವೈಯುಕ್ತಿಕವಾದ ಪ್ರಚಾರ ಸಾಮಗ್ರಿಗಳನ್ನು ಬಳಸತಕ್ಕದ್ದು.

14. ಪದಾಧಿಕಾರಿಗಳ ಆಯ್ಕೆ:

ಸಂಘದ ಪದಾಧಿಕಾರಿಗಳನ್ನು ನೇರವಾಗಿ ಸಂಘದ ಸದಸ್ಯರು ಗುಪ್ತ ಮತದಾನದ ಮೂಲಕ ಚುನಾಯಿಸತಕ್ಕದ್ದು ಅಥವಾ ಆಯ್ಕೆ ಮಾಡತಕ್ಕದ್ದು.

15. ಕಾರ್ಯಕಾರಿ ಸಮಿತಿ:

ಕಾರ್ಯಕಾರಿ ಸಮಿತಿಯಲ್ಲಿ ಒಟ್ಟು **09 (ಒಂಬತ್ತು)** ಜನ ಸದಸ್ಯರು ಇರತಕ್ಕದ್ದು.

N. Vanishree

ಅಧ್ಯಕ್ಷರು

ಕಾರ್ಯದರ್ಶಿ

16. ಕಾರ್ಯಕಾರಿ ಸಮಿತಿ ಸಭೆ:

ಕಾರ್ಯಕಾರಿ ಸಮಿತಿ ಸಭೆಯು ಕನಿಷ್ಟ ಪ್ರತಿ ತಿಂಗಳಿಗೊಮ್ಮೆ ಸಭೆ ಸೇರಿ ಸಂಘದ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸತಕ್ಕದ್ದು.

17. ಕಾರ್ಯಕಾರಿ ಸಮಿತಿ ಕರ್ತವ್ಯಗಳು:

1. ಸಂಘದ ಸದಸ್ಯರನ್ನು ಸೇರಿಸಿಕೊಳ್ಳುವುದು ಮತ್ತು ನವೀಕರಿಸುವುದು.
2. ನಿಗದಿಪಡಿಸಿದ ದಿನಾಂಕಗಳಂದು ಸಮಿತಿ ಸಭೆ ನಡೆಸುವುದು.
3. ತುರ್ತು ಸಂದರ್ಭದಲ್ಲಿ ವಿಶೇಷ ಸಭೆ ಕರೆಯುವುದು.
4. ಸಂಘದ ಲೆಕ್ಕ ಪತ್ರಗಳ ನಿರ್ವಹಣೆ ಹಾಗೂ ಆಡಿಟ್ ಮಾಡಿಸುವುದು.
5. ವಾರ್ಷಿಕ ಮಹಾಸಭೆಯ ಮುಂದೆ ಲೆಕ್ಕಪತ್ರ ಮಂಡಿಸುವುದು.
6. ಕಾರ್ಯಕಾರಿ ಸಮಿತಿಯು ಸಂಘಕ್ಕೆ ಆಧಾರ, ಗುತ್ತಿಗೆ, ಭೋಗ್ಯ, ದಾನ ಮತ್ತು ಕ್ರಯದ ಮೂಲಕ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳುವ ಮತ್ತು ವಿಸ್ತರಿಸುವ ಅಧಿಕಾರವನ್ನು ಹೊಂದಿರುತ್ತದೆ.
7. ಕಾರ್ಯಕಾರಿ ಸಮಿತಿಯು ಶುಲ್ಕ, ದಾನ, ಅನುದಾನ, ಸಹಾಯಧನವನ್ನು ಸಂಘ ಸಂಸ್ಥೆಗಳು ಇಲ್ಲವೇ ವ್ಯಕ್ತಿಗಳಿಂದ ಪಡೆಯಬಹುದು.
8. ಸಂಘದ ಕೆಲಸದ ಹಿತದೃಷ್ಟಿಯಿಂದ ಸಂಘದ ಸದಸ್ಯರನ್ನು ಸಭೆ, ಸಮಾರಂಭಗಳಲ್ಲಿ ಭಾಗವಹಿಸಲು ನಿಯೋಜಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.
9. ಸದಸ್ಯತ್ವವನ್ನು ಅಂಗೀಕರಿಸುವ ಹಾಗೂ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತದೆ.
10. ಕಾರ್ಯಕಾರಿ ಸಮಿತಿ ಸಭೆಗೆ ಮೂರನೇ ಎರಡು ಭಾಗದ ಸದಸ್ಯರಿದ್ದಲ್ಲಿ ಕೋರಂ ಎಂದು ಪರಿಗಣಿಸತಕ್ಕದ್ದು. ಕೋರಂ ಇಲ್ಲದೆ ಸಭೆ ನಡೆಸುವಂತಿಲ್ಲ.
11. ಯಾವುದೇ ಸದಸ್ಯರು ಪೂರ್ವಾನುಮತಿ ಇಲ್ಲದೇ ಸತತವಾಗಿ ಮೂರು ಸಭೆಗಳಿಗೆ ಗೈರು ಹಾಜರಾದಲ್ಲಿ ಅಂತಹ ಸದಸ್ಯರು ಕಾರ್ಯಕಾರಿ ಸಮಿತಿ ಸಭೆಯ ಸದಸ್ಯತ್ವವನ್ನು ರದ್ದು ಗೊಳಿಸುವ ಬಗ್ಗೆ ಸಮಿತಿಯು ಕ್ರಮವಿಡಬಹುದು.
12. ಕೋರಂ ಇಲ್ಲದೇ ಮುಂದೂಡಿ ಮತ್ತೆ ಸೇರುವ ಸಭೆಗೆ ಕೋರಂ ಅವಶ್ಯಕತೆ ಇರುತ್ತದೆ.
13. ಕಾರ್ಯಕಾರಿ ಸಮಿತಿಯ ಅವಧಿ 5 (ಐದು) ವರ್ಷಗಳಾಗಿರುತ್ತದೆ.
14. ಸಂಘ ವಿರೋಧಿ ಚಟುವಟಿಕೆಗಳಲ್ಲಿ ತೊಡಗುವ ಯಾವುದೇ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರುಗಳನ್ನು ಅವರಿಗೆ ವಿವರಣೆ ನೀಡುವ ಅವಕಾಶ ನೀಡಿದ ನಂತರ, ಸಂಘದ ಹಿತದೃಷ್ಟಿಯಿಂದ ಅವಶ್ಯಕ ಎಂದು ಕಂಡುಬಂದಲ್ಲಿ ಅಂತಹವರನ್ನು ವಜಾ ಮಾಡುವ ಅಧಿಕಾರವನ್ನು ಹೊಂದಿರುತ್ತದೆ.

18. ಪದಾಧಿಕಾರಿಗಳು ಹಾಗೂ ಆಡಳಿತ ಮಂಡಳಿ ಸದಸ್ಯರ ಸಂಖ್ಯೆ:-

ಕಾರ್ಯಕಾರಿ ಸಮಿತಿ ಸಭೆಯಲ್ಲಿ ಒಟ್ಟು **09 (ಒಂಬತ್ತು)** ಸದಸ್ಯರುಗಳಿದ್ದು, ವಿವರ ಈ ಕೆಳಕಂಡಂತೆ ಇರುತ್ತದೆ.

N. Vanishree
ಅಧ್ಯಕ್ಷರು

ಕಾರ್ಯದರ್ಶಿ

1) ಅಧ್ಯಕ್ಷರು-ಒಬ್ಬರು, 2) ಕಾರ್ಯದರ್ಶಿ-ಒಬ್ಬರು, ಮತ್ತು 5) ಕಾರ್ಯಕಾರಿ ಸಮಿತಿ ಸದಸ್ಯರು- ಏಳು ಸದಸ್ಯರು ಸೇರಿ ಒಟ್ಟು 09 (ಒಂಬತ್ತು) ಸದಸ್ಯರು ಇರುತ್ತಾರೆ.

ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿ ಕರ್ತವ್ಯಗಳು:-

1) ಅಧ್ಯಕ್ಷರು:-

1. ಅಧ್ಯಕ್ಷರು ಸಂಘದ ಆಡಳಿತ ಮತ್ತು ಕಾರ್ಯನಿರ್ವಹಣೆಯ ಸಂಪೂರ್ಣ ಅಧಿಕಾರ ಮತ್ತು ಜವಾಬ್ದಾರಿಯನ್ನು ಹೊಂದಿರುತ್ತಾರೆ.
2. ಅಧ್ಯಕ್ಷರು ಸಂಘದ ಎಲ್ಲಾ ಸಮಿತಿ ಸಭೆಗಳಲ್ಲಿ ಅಧ್ಯಕ್ಷತೆ ವಹಿಸುವುದು, ತುರ್ತು ಸಂದರ್ಭ ಹಾಗೂ ಸಮಯದ ಅಭಾವದಿಂದ ಸಮಾಲೋಚಿಸಲು ಸಾಧ್ಯವಾಗದ ಪಕ್ಷದಲ್ಲಿ ಸಂಘದ ಹಿತದೃಷ್ಟಿಯಿಂದ ಅಗತ್ಯ ತೀರ್ಮಾನ ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿರುತ್ತಾರೆ. ಹಾಗೆ ತೆಗೆದುಕೊಂಡ ತೀರ್ಮಾನಗಳನ್ನು ಮುಂದಿನ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕು.
3. ಸಂಘದ ಕಾರ್ಯ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಿ ಅದರ ಲೆಕ್ಕಪತ್ರಗಳನ್ನು ಪರಿಶೀಲಿಸುವುದು.
4. ಸದಸ್ಯರುಗಳಿಂದ ಸಂಘಕ್ಕೆ ಬರುವ ದೂರು, ಮನವಿ ಇತ್ಯಾದಿಗಳನ್ನು ಪರಿಶೀಲಿಸಿ, ಚರ್ಚಿಸಿ ತೀರ್ಮಾನಿಸುವುದು.
5. ಸಂಘದ ಸದಸ್ಯರ ಹಿತದೃಷ್ಟಿಯಿಂದ ಕಾಲಕಾಲಕ್ಕೆ ಅವಶ್ಯಕವಾದ ತೀರ್ಮಾನಗಳನ್ನು ತೆಗೆದು ಕೊಳ್ಳುವ ಅಧಿಕಾರವನ್ನು ಸಂಘದ ಅಧ್ಯಕ್ಷರು ಹೊಂದಿರುತ್ತಾರೆ.
6. ಸಂಘದ ಅಭಿವೃದ್ಧಿ ಮತ್ತು ಯೋಜನೆ ಕುರಿತಂತೆ, ಸಂಘದ ಕಾರ್ಯದರ್ಶಿ ಮತ್ತು ಆಡಳಿತ ಮಂಡಳಿ ಸದಸ್ಯರುಗಳಿಗೆ ಸಲಹೆ ಸೂಚನೆಗಳನ್ನು ನೀಡುವ ಅಧಿಕಾರವನ್ನು ಹೊಂದಿರುತ್ತಾರೆ.
7. ಸಂಘದ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಕಾರ್ಯದರ್ಶಿಯೊಡನೆ ಜಂಟಿಯಾಗಿ ಖಾತೆ ತೆರೆದು ವ್ಯವಹಾರ ನಡೆಸಲು ಅಧಿಕಾರ ಹೊಂದಿರುತ್ತಾರೆ.

2) ಕಾರ್ಯದರ್ಶಿ :-

1. ಸಂಘದ ಆಡಳಿತ ಮಂಡಳಿ ಸಭೆ, ವಿಶೇಷ ಸಭೆ ಮತ್ತು ವಾರ್ಷಿಕ ಮಹಾಸಭೆಗಳನ್ನು ಅಧ್ಯಕ್ಷರ ಜೊತೆ ಸಮಾಲೋಚಿಸಿ ಸಭೆಯನ್ನು ಕರೆಯಲು, ಮತ್ತು ಸಭೆಯ ನಡವಳಿಗಳನ್ನು ರೆಕಾರ್ಡ್ ಮಾಡಲು ಅಧಿಕಾರ ಹೊಂದಿರುತ್ತಾರೆ.
2. ಸಂಘದ ಅಧ್ಯಕ್ಷರ ಜೊತೆ ಸಮಾಲೋಚಿಸಿ, ಸಂಘದ ಅಭಿವೃದ್ಧಿ ಬಗ್ಗೆ ಕಾರ್ಯಕ್ರಮವನ್ನು ರೂಪಿಸಿ ಜಾರಿಗೆ ತರಲು ಶ್ರಮಿಸುವುದು.

N. Vanishree
ಅಧ್ಯಕ್ಷರು

ಕಾರ್ಯದರ್ಶಿ

3. ಸಂಘದ ಅಧ್ಯಕ್ಷರು, ಹಾಗೂ ಆಡಳಿತ ಮಂಡಳಿ ಸದಸ್ಯರು ಕಾಲಕಾಲಕ್ಕೆ ವಹಿಸುವ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಲು ಅಧಿಕಾರ ಹೊಂದಿರುತ್ತಾರೆ.
4. ಸಂಘದ ಎಲ್ಲಾ ಅಗತ್ಯ ದಾಖಲಾತಿಗಳು ಮತ್ತು ಪುಸ್ತಕಗಳನ್ನು ಭದ್ರತೆಯಲ್ಲಿ ಇಟ್ಟುಕೊಳ್ಳುವ ಅಧಿಕಾರವನ್ನು ಹೊಂದಿರುತ್ತಾರೆ.
5. ಸಂಘದ ಎಲ್ಲಾ ದಾಖಲಾತಿಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಅಧಿಕಾರ ಹೊಂದಿರುತ್ತಾರೆ.
6. ಸಂಘಕ್ಕೆ ಬರುವ ಎಲ್ಲಾ ವಿಧವಾದ ಹಣಕ್ಕೆ ಮತ್ತು ಜಮಾಕ್ಕೆ ರಶೀದಿ ನೀಡುವುದು, ವಸೂಲಾದ ಮೊತ್ತವನ್ನು ಸಂಘದ ಹೆಸರಿನಲ್ಲಿ ಬ್ಯಾಂಕ್‌ಗೆ ಜಮಾ ಮಾಡುವುದು.
7. ರೂ.1000/-ಕ್ಕೆ ಮೇಲ್ಪಟ್ಟು ಪಾವತಿಸಬೇಕಾದ ಹಣವನ್ನು ಅಧ್ಯಕ್ಷರಿಂದ ಅನುಮತಿ ಪಡೆದು ಮತ್ತು ಅಗತ್ಯ ವೋಚರ್ ಪಡೆದು ಪಾವತಿಸುವುದು.
8. ರಶೀದಿ ಪುಸ್ತಕ, ನಗದು ಪುಸ್ತಕ, ಸದಸ್ಯತ್ವ ರಿಜಿಸ್ಟರ್, ಸ್ಟಾಕ್ ರಿಜಿಸ್ಟರ್‌ಗಳನ್ನು ಇಡುವುದು ಹಾಗೂ ನಿರ್ವಹಿಸುವುದು.
9. ಮಾಸಿಕ ಸ್ವೀಕೃತಿ ಹಾಗೂ ವೆಚ್ಚದ ತಃಖ್ತೆಯನ್ನು ಸಿದ್ಧಪಡಿಸಿ ಕಾರ್ಯಕಾರಿ ಸಮಿತಿಯಲ್ಲಿ ಮಂಡಿಸುವುದು.
10. ವರ್ಷದ ಅಂತ್ಯಕ್ಕೆ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸಿ, ಅದನ್ನು ಕಾರ್ಯಕಾರಿ ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆದು ವಾರ್ಷಿಕ ಮಹಾಸಭೆಗೆ ಮಂಡಿಸುವುದು.
11. ಪಾಸ್ ಬುಕ್, ಚೆಕ್ ಬುಕ್ ಮತ್ತು ನಗದು ಪುಸ್ತಕ ಇತ್ಯಾದಿ ದಾಖಲೆಗಳನ್ನು ಖಜಾಂಚಿಯ ವಶದಲ್ಲಿಟ್ಟುಕೊಂಡು ನಿರ್ವಹಣೆ ಮಾಡುವುದು.
12. ಸಂಘದ ಜಮಾ ಖರ್ಚು, ಲಾಭ ನಷ್ಟ, ಆಸ್ತಿ ಮತ್ತು ಜವಾಬ್ದಾರಿ ತಃಖ್ತೆಯನ್ನು ಸಿದ್ಧಪಡಿಸುವುದು.
13. ಆಂತರಿಕ ಲೆಕ್ಕಪರಿಶೋಧಕರಿಗೆ ಅಗತ್ಯವಾಗುವ ದಾಖಲೆಗಳನ್ನು ಒದಗಿಸುವುದು.
14. ಸಂಘದ ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರುಗಳು ನೀಡುವ ಸಲಹೆ ಸೂಚನೆ ಮೇರೆಗೆ ಸಂಘದ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು.
15. ಅಧ್ಯಕ್ಷರ ಅನುಮತಿಯ ಮೇರೆಗೆ ಹಾಗೂ ಸಮಿತಿಯು ಕಾಲಕಾಲಕ್ಕೆ ವಹಿಸುವ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ದಕ್ಷತೆಯಿಂದ ನಿರ್ವಹಿಸುವುದು.

3) ನಿರ್ದೇಶಕರು / ಕಾರ್ಯಕಾರಿ ಸಮಿತಿ ಸದಸ್ಯರು:-

ಸಂಘದ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ರೂಪಿಸುವುದು, ಬೆಳವಣಿಗೆಗೆ ಶ್ರಮಿಸುವುದು ಮತ್ತು ಪ್ರೋತ್ಸಾಹಿಸುವುದು, ಹೊಸ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಜಾರಿಗೆ ತರುವುದು. ಸದಸ್ಯತ್ವ ಮಂಜೂರು ಮಾಡುವುದು, ರದ್ದುಪಡಿಸುವುದು, ದೇಣಿಗೆ ಸಂಗ್ರಹಿಸುವುದು ಹಾಗೂ ಸಂಘದ ಸದಸ್ಯರ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುವುದು. ಸಂಘದ ಆಡಳಿತ ಮಂಡಳಿ ಸಭೆಯಲ್ಲಿ ಸಲಹೆ ಸೂಚನೆಗಳನ್ನು ನೀಡುವುದು, ಅನುಷ್ಠಾನ ಮಾಡುವುದು ಇತ್ಯಾದಿ.

N. Vanishree

ಅಧ್ಯಕ್ಷರು

ಕಾರ್ಯದರ್ಶಿ

19. ಸಭೆಯನ್ನು ಕರೆಯುವ ಬಗ್ಗೆ ನೋಟೀಸು ಇತ್ಯಾದಿಗಳು:-

ಕಾರ್ಯದರ್ಶಿಯವರು ಸಭೆಯನ್ನು ಕರೆಯಲು ಪ್ರತಿಯೊಬ್ಬ ಸದಸ್ಯರುಗಳಿಗೂ ನೋಂದಾಯಿತ ಅಂಚೆ ಇಲ್ಲವೆ ಮುದ್ರಾಂ ಮೂಲಕ ನೋಟೀಸನ್ನು ಜಾರಿ ಮಾಡಬೇಕು. ವಿಶೇಷ ಸಭೆಗಳಿಗೆ ಮತ್ತು ವಾರ್ಷಿಕ ಸಭೆಗಳಿಗೆ 21 ದಿನ ಮುಂಚಿತವಾಗಿ ನೋಟೀಸನ್ನು ಜಾರಿ ಮಾಡಬೇಕು. ಇದರಲ್ಲಿ ವೇಳೆ ಮತ್ತು ಸಭೆ ಜರುಗುವ ವಿಳಾಸ ಹಾಗೂ ಚರ್ಚಿಸತಕ್ಕ ವಿಷಯಗಳನ್ನು ನಮೂದಿಸುವುದು.

20. ಸಂಘದ ಹಣಕಾಸು ಮತ್ತು ಲೆಕ್ಕಪತ್ರಗಳ ನಿರ್ವಹಣೆ:-

1. ಸಂಘದ ವ್ಯವಹಾರವನ್ನು ರಾಷ್ಟ್ರೀಕೃತ ಬ್ಯಾಂಕ್ ಅಥವಾ ಸಹಕಾರ ಬ್ಯಾಂಕಿನಲ್ಲಿ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಜಂಟಿಯಾಗಿ ಖಾತೆ ತೆರೆದು, ವ್ಯವಹಾರ ನಡೆಸತಕ್ಕದ್ದು.
2. ಸಂಘದ ಜ್ಞಾಪನಾ ಮತ್ತು ಬೈಲಾ ನಿಯಮ ನಿಬಂಧನೆಗಳನ್ನು ತಿದ್ದುಪಡಿ ಮಾಡಬೇಕಾದ ಸಂದರ್ಭದಲ್ಲಿ ಕರ್ನಾಟಕ ಸಂಘಗಳ ಕಾಯಿದೆ 1960 ಕಲಂ 9ನ್ನು ಅನುಸರಿಸುವುದು.
3. ಮಹಾಸಭೆಯು ನೇಮಿಸುವ ಸರ್ಟಿಫೈಡ್ ಚಾರ್ಟರ್ಡ್ ಆಡಿಟರ್‌ರವರಿಂದ ಮುಂದಿನ ಸಾಲಿಗೆ ಅನುಕೂಲವಾಗುವ ರೀತಿಯಲ್ಲಿ ಆಡಿಟ್ ಮಾಡಿಸಿ ಅದನ್ನು ಕರ್ನಾಟಕ ಸಂಘಗಳ ಕಾಯಿದೆ 1960 ಕಲಂ 13ರ ರೀತ್ಯಾ ಅದನ್ನು ಕರ್ನಾಟಕ ಸೊಸೈಟಿ ರಿಜಿಸ್ಟ್ರಾರ್‌ರವರಲ್ಲಿ ಫೈಲು ಮಾಡಿ ಅವರಿಂದ ಸ್ವೀಕೃತಿ ಪಡೆಯುವುದು.
4. ಸಂಘವನ್ನು ಸಮಾನ ಉದ್ದೇಶ ಹೊಂದಿರುವ ಮತ್ತೊಂದು ಸಂಘಕ್ಕೆ ವಿಲೀನಗೊಳಿಸುವ ಸಂದರ್ಭದಲ್ಲಿ ಕರ್ನಾಟಕ ಸಂಘ ಸಂಸ್ಥೆಗಳ ಕಾಯಿದೆ 1960 ಕಲಂ 21 ರ ರೀತ್ಯಾ ಕ್ರಮ ಅನುಸರಿಸುವುದು.
6. ಸಂಘವನ್ನು ಮುಚ್ಚುವ ಅಥವಾ ಸಂಘದ ವ್ಯವಹಾರವನ್ನು ಸರಿ ಹೊಂದಿಸುವ ಸಂದರ್ಭದಲ್ಲಿ ಕರ್ನಾಟಕ ಸಂಘ ಸಂಸ್ಥೆಗಳ ಕಾಯಿದೆ 1960 ಕಲಂ 22ನ್ನು ಅನುಸರಿಸುವುದು. ಮತ್ತು ಯಾವುದೇ ಸಂದರ್ಭದಲ್ಲಿ ಲಾಭಾಂಶವನ್ನು ಯಾವ ಸದಸ್ಯರು ಪಡೆಯದಂತೆ ಕರ್ನಾಟಕ ಸಂಘ ಸಂಸ್ಥೆಗಳ ಕಾಯಿದೆ 1960 ಕಲಂ 23ರ ಪ್ರಕಾರ ನಡೆದುಕೊಳ್ಳುವುದು.

21. ವಾರ್ಷಿಕ ಲೆಕ್ಕಪತ್ರಗಳ ಅವಧಿ:-

1. ಲೆಕ್ಕಪತ್ರಗಳ ಅವಧಿ ಏಪ್ರಿಲ್ 1 ರಿಂದ ಮುಂದಿನ ಮಾರ್ಚ್ 31ರ ವರೆಗೆ ಇರತಕ್ಕದ್ದು.

22. ಸಂಘದ ಕೆಲಸದ ವೇಳೆ:-

1. ಸಂಘದ ಕಛೇರಿಯು ಪ್ರತಿ ದಿನ ಬೆಳಿಗ್ಗೆ 10.00 ರಿಂದ ಸಂಜೆ 5.00 ಗಂಟೆಯವರೆಗೆ ಇರುತ್ತದೆ.

N. Vanishree

ಅಧ್ಯಕ್ಷರು

ಕಾರ್ಯದರ್ಶಿ

23. ಇತರೆ ಅಂಶಗಳು:-

ಈ ಸಂಘದ ಕಾರ್ಯಚಟುವಟಿಕೆಗಳನ್ನು ಕರ್ನಾಟಕ ಸಂಘ ಸಂಸ್ಥೆಗಳ ಕಾಯಿದೆ 1960 ರಡಿಯಲ್ಲಿ ಅಳವಡಿಸಿರುವ ಕಾನೂನಿನನ್ವಯ ಸಂಘವನ್ನು ನಡೆಸಲು ಬದ್ಧರಾಗಿರುತ್ತೇವೆ. ಹಾಗೂ ಈ ಸಂಘವು ನಡೆಸಲ್ಪಡುವ ಕಛೇರಿಗಳಿಗೆ ಸರ್ಕಾರಿ ಆದೇಶದ ರೀತ್ಯಾ 14 ವರ್ಷದೊಳಗಿನ ಬಾಲ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವುದಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸಿ ಸಹಿ ಮಾಡಿರುತ್ತೇವೆ.

N. Vanishree

ಅಧ್ಯಕ್ಷರು

ಕಾರ್ಯದರ್ಶಿ

ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಮಂಡಳಿ ಸದಸ್ಯರ ಸಹಿ.

ಕ್ರಸಂ	ಹೆಸರು	ಹುದ್ದೆ	ಸಹಿ
01	ಶ್ರೀಮತಿ. ಎನ್. ವಾಣಿಶ್ರೀ	ಅಧ್ಯಕ್ಷರು	N. Vanishree
02	ಶ್ರೀ. ಪ್ರಣವ್ ಕುಮಾರ್ ನಾಯರ್	ಕಾರ್ಯದರ್ಶಿ	
03	ಶ್ರೀಮತಿ. ಉಷಾರಾಣಿ ಎಂ.ಸಿ.	ನಿರ್ದೇಶಕರು	
04	ಶ್ರೀ. ಪಿ. ಶಿವಾನಂದ ಭಾರತಿ	ನಿರ್ದೇಶಕರು	
05	ಶ್ರೀ. ನಾಗೇಂದ್ರ ಮೂರ್ತಿ ಎಂ.ಪಿ.	ನಿರ್ದೇಶಕರು	
06	ಶ್ರೀ. ಸಾವಂತ್ ಬಿ.ಎಸ್.	ನಿರ್ದೇಶಕರು	
07	ಶ್ರೀ. ರೋಹಿತ್ ಸುಬ್ಬಯ್ಯ	ನಿರ್ದೇಶಕರು	
08	ಶ್ರೀಮತಿ. ಪ್ರಿಯಾ ಎ.ಜಗದೀಶ್	ನಿರ್ದೇಶಕರು	Priya A
09	ಶ್ರೀ.ಲಕ್ಷಿತ್ ಎಂ.ಡಿ.	ನಿರ್ದೇಶಕರು	